ದಿನಾಂಕಃ 09.07.2026

ಎಸ್.ಸಿಃ 25/2023

ಆರ್.ಡಬ್ಲ್ಯೂ: 1

ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.

ಪಾಟೀ ಸವಾಲುಃ ಅರ್ಜಿದಾರರ ಪರ ವಕೀಲರಿಂದಃ

ನಾನು ಮದ್ದೂರಿನಲ್ಲಿ ಎ.ಇ.ಇ ಯಾಗಿ ಒಂದು ವರ್ಷದಿಂದ ಕೆಲಸ ಮಾಡುತ್ತಿದ್ದೇನೆ. ನಾನು ನ್ಯಾಯಾಲಯಕ್ಕೆ ಅಧಿಕಾರ ಪತ್ರವನ್ನು ಹಾಜರು ಪಡಿಸಿದ್ದೇನೆ. ಪ್ರಮಾಣ ಪತ್ರದ ಮಾಹಿತಿಯನ್ನು ಹೇಳಿ ಬರೆಸಿದವರು ಯಾರು ಎಂದರೆ ಸಾಕ್ಷಿ ನಮ್ಮ ಬಳಿ ದಾಖಲಾತಿಗಳು ಇರುತ್ತವೆ, ಅವುಗಳನ್ನು ನಮ್ಮ ವಕೀಲರಿಗೆ ಕೊಟ್ಟಿರುತ್ತೇವೆ ಅದನ್ನು ನೋಡಿ ನಮ್ಮ ವಕೀಲರು ತಯಾರು ಮಾಡಿರುತ್ತಾರೆ ಎಂದು ಉತ್ತರಿಸುತ್ತಾರೆ. ನಾನು ಡಿಪ್ಲಮೊ ಓದಿರುತ್ತೇನೆ. ನಿಮ್ಮ ಪ್ರಮಾಣ ಪತ್ರದಲ್ಲಿ Maxim Actio personalis moritur cum persona ಇದರ ಅರ್ಥ ನಿಮಗೆ ಗೊತ್ತಾ ಎಂದರೆ ಸಾಕ್ಷಿ ಅಷ್ಟಾಗಿ ಮಾಹಿತಿ ಇಲ್ಲ ಎಂದು ಉತ್ತರಿಸುತ್ತಾರೆ. ಅರ್ಜಿದಾರರು ಕಾಲ ಮಿತಿ ಮೀರಿ ಪ್ರಕಾರಣ ಸಲ್ಲಿಸಿದ್ದಾರೆ ಎಂದು ಹೇಳಿದ್ದೀರಿ, ಆದರೆ ಕಾಲಮಿತಿಯ ಒಳಗೆ ಅರ್ಜಿದಾರರು ಈ ಪ್ರಕರಣ ಸಲ್ಲಿಸಿದ್ದಾರೆ ಎಂದರೆ ಸಾಕ್ಷಿ ಕಾಲಮಿತಿ ಮುಗಿದಿದೆ ಎಂದು ಉತ್ತರಿಸುತ್ತಾರೆ. ನಿಮ್ಮ ಪ್ರಮಾಣ ಪತ್ರದ 3 ನೇ ಕಂಡಿಕೆಯಲ್ಲಿ ದಿ.15.04.2016 ರಂದು ಸಂಬಂಧಿಸಿರುವ ಅವಘಡ ಹೆಚ್.ಡಿ.ಬೋರೇಗೌಡರವರ ನಿರ್ಲಕ್ಷ್ಯತೆಯಿಂದ ಹಸು ಸತ್ತಿಲ್ಲ, ನಿಮ್ಮ ಇಲಾಖೆಯವರು ಸೂಕ್ತ ರೀತಿಯಲ್ಲಿ ವೈಯರ್ ಗಳ ನಿರ್ವಹಣೆ ಮಾಡದೆ ನಿರ್ಲಕ್ಷ್ಯತೆ ತೋರಿ ವಿಧ್ಯುತ್ ವಯರ್ ಕಟ್ ಆಗಿ ಬಿದ್ದ ಪರಿಣಾಮ ಘಟನೆ ಸಂಭವಿಸಿರುತ್ತದೆ ಎಂದರೆ ಸಾಕ್ಷಿ ಪ್ರತಿ 3 ತಿಂಗಳಿಗೊಮ್ಮೆ ವಿಧ್ಯುತ್ ವಯರ್ ಗಳ ಪರಿಶೀಲನೆ ಮಾಡಿ ನಿರ್ವಹಣೆ ಮಾಡುತ್ತೇವೆ, ಹಾಗಾಗಿ ನಮ್ಮ ಇಲಾಖೆಯ ಯಾವುದೇ ನಿರ್ಲಕ್ಷ್ಯತೆ ಇರುವುದಿಲ್ಲ ಎಂದು ಉತ್ತರಿಸುತ್ತಾರೆ. ನೀವು ಹೇಳುವ ರೀತಿ ಪ್ರತಿ 3 ತಿಂಗಳಿಗೊಮ್ಮೆ ವಿಧ್ಯುತ್ ವಯರ್ ಗಳ ಪರಿಶೀಲನೆ ಮಾಡಿ ನಿರ್ವಹಣೆ ಮಾಡಿಲ್ಲ, ಸುಳ್ಳು ಹೇಳುತ್ತಿದ್ದೀರಿ ಎಂದರೆ ಸಾಕ್ಷಿ ಸರಿಯಲ್ಲ ಎಂದು ಉತ್ತರಿಸುತ್ತಾರೆ. ನಿಮ್ಮ ಪ್ರಮಾಣ ಪತ್ರದ 4 ನೇ ಕಂಡಿಕೆಯಲ್ಲಿ ಹೇಳಿರುವ ಸಂಗತಿಗಳು ಸುಳ್ಳು, ನಿಮ್ಮ ಇಲಾಖೆಯ ನಿರ್ಲಕ್ಷ್ಯತೆಯಿಂದಲೇ ಹಸು ತೀರಿಕೊಂಡಿರುವುದು ಎಂದರೆ ಸಾಕ್ಷಿ ಸುಳ್ಳು ಎಂದು ಉತ್ತರಿಸುತ್ತಾರೆ. ನಿಮ್ಮ ಪ್ರಮಾಣ ಪತ್ರದ ಕಂಡಿಕೆ 4 ರಲ್ಲಿ ಮೃತ ಹಸು ದಿನಕ್ಕೆ 8 ಲೀಟರ್ ಹಾಲು ಕೊಡುತ್ತಿರಲಿಲ್ಲ, ಮತ್ತು

ಸದರಿ ಹಾಲು ಮಾರಾಟದಿಂದ ದಿನಕ್ಕೆ 150–200 ಸಂಪಾದನೆ ಮಾಡುತ್ತಿರಲಿಲ್ಲ, ಸುಳ್ಳು ಹೇಳಿರುತ್ತಾರೆ ಎಂದು ಹೇಳಿದ್ದೀರಿ, ಆದರೆ ಪಶು ವೈದ್ಯರು ಮರಣೋತ್ತರ ಪರೀಕ್ಷೆ ಮಾಡಿ ನೀಡಿದ ವರದಿಯ ಆಧಾರದ ಮೇಲೆ ವಾದಿ ಹೇಳಿದ್ದಾರೆ ಎಂದರೆ ಸಾಕ್ಷಿ ನಮಗೆ ಆ ವರದಿ ಬಂದಿಲ್ಲ ಎಂದು ಉತ್ತರಿಸುತ್ತಾರೆ. ಸದರಿ ವರಿದಿಯನ್ನು ನಿಮ್ಮ ಕಛೇರಿಯಿಂದಲೇ ವಾದಿ ಪಡೆದುಕೊಂಡು ನ್ಯಾಯಾಲಯಕ್ಕೆ ಹಾಜರು ಪಡಿಸಿರುವುದು ಎಂದರೆ ಸಾಕ್ಷಿ ಸದರಿ ವರದಿಯ ಆಧಾರದ ಮೇಲೆಯೆ ಪರಿಹಾರ ಕೊಟ್ಟಿರುವುದು ಎಂದು ಉತ್ತರಿಸುತ್ತಾರೆ. ನೀವು ನೀಡಿರುವ ರೂ.5000/– ಸಮಂಜಸವಾದ ಪರಿಹಾರವಲ್ಲ ಎಂದರೆ ಸಾಕ್ಷಿ ಸರಿಯಲ್ಲ ಎಂದು ಉತ್ತರಿಸುತ್ತಾರೆ. ನೀವು ನೀಡಿರುವ ಪರಿಹಾರ ಕಾನೂನಿಗೆ ಅನುಗುಣವಾಗಿ ಇಲ್ಲ ಎಂದರೆ ಸಾಕ್ಷಿ ಹಸುವಿನ ವಯಸ್ಸು ಆಧರಿಸಿ ಪರಿಹಾರ ನೀಡಿದ್ದೇವೆ ಎಂದು ಉತ್ತರಿಸುತ್ತಾರೆ. ನಿಮ್ಮ ಇಲಾಖೆಯ ತಪ್ಪಿನಿಂದ ಘಟನೆ ಸಂಭವಿಸಿದ್ದರೂ ಸಹ ಈಗ ಪರಿಹಾರ ಕೊಡುವುದರಿಂದ ತಪ್ಪಿಸಿಕೊಳ್ಳುವ ಸಲುವಾಗಿ ಸುಳ್ಳು ಪ್ರಮಾಣ ಪತ್ರ ಸಲ್ಲಿಸಿ ಸುಳ್ಳು ಸಾಕ್ಷ್ಯಾ ನುಡಿಯುತ್ತಿದ್ದೀರಿ ಎಂದರೆ ಸಾಕ್ಷಿ ಸರಿಯಲ್ಲ ಎಂದು ಉತ್ತರಿಸುತ್ತಾರೆ. ನ್ಯಾಯಾಲಯಕ್ಕೆ ಪ್ರಕರಣ ಸಲ್ಲಿಸಿವ ಪೂರ್ವದಲ್ಲಿ ವಕೀಲರ ಮೂಲಕ ಕೊಟ್ಟಿರುವ ನೋಟೀಸ್ ಕ್ರಮವಾಗಿ ಇದೆ, ನೀವು ಸದಕ್ಕೆ ಅಸಹಜ ಉತ್ತರ ನೀಡಿದ್ದೀರಿ ಎಂದರೆ ಸಾಕ್ಷಿ ಸರಿಯಲ್ಲ ಎಂದು ಉತ್ತರಿಸುತ್ತಾರೆ. ನಿಪಿ–1 ರಿಂದ 10 ದಾಖಲಾತಿಗಳನ್ನು ನಿಮ್ಮ ಇಲಾಖೆಯಿಂದಲೇ ಅರ್ಜಿದಾರರು ಪಡೆದುಕೊಂಡಿರುವುದು ಎಂದರೆ ಸಾಕ್ಷಿ ಹೌದು ಎಂದು ಉತ್ತರಿಸುತ್ತಾರೆ. ನಿಪಿ–9 ಅನ್ನು ವಿದ್ಯುತ್ ಪರಿವೀಕ್ಷಕರು ಸರ್ಕಾರಕ್ಕೆ ನೀಡಿರುವ ವರದಿ ಎಂದರೆ ಸಾಕ್ಷಿ ಹೌದು ಎಂದು ಉತ್ತರಿಸುತ್ತಾರೆ. ಸದರಿ ವರದಿಯಲ್ಲಿ ನಿಮ್ಮ ಇಲಾಖೆಯ ನಿರ್ಲಕ್ಷ್ಯತೆಯ ಬಗ್ಗೆ ವರದಿ ಮಾಡಿದ್ದಾರೆ ಎಂದರೆ ಸಾಕ್ಷಿ ಅವರು ಆ ರೀತಿ ಅಭಿಪ್ರಾಯ ಪಟ್ಟಿದ್ದಾರೆ, ಆದರೆ ಯಾವುದೇ ವಯರ್ ತುಂಡಾಗಿ ಬಿದ್ದರೆ ತಕ್ಷಣವೆ ಫೀಡರ್ ಟ್ರಿಪ್ ಆಗುತ್ತದೆ ಎಂದು ಉತ್ತರಿಸುತ್ತಾರೆ. ಈ ಪ್ರಕರಣದಲ್ಲಿ ಫೀಡರ್ ಟ್ರಿಪ್ ಆಗಿಲ್ಲ ವಿದ್ಯುತ್ ಪ್ರಸರಣ ಮುಂದುವರಿದಿದೆ ಹಾಗಾಗಿ ಹಸು ವಯರ್ ಸಂಪರ್ಕಕ್ಕೆ ಬಂದು ಮೃತ ಪಟ್ಟಿದೆ, ಇದು ನಿಮ್ಮ ಇಲಾಖೆಯ ನಿರ್ಲಕ್ಷ್ಯತೆ ಎಂದರೆ ಸಾಕ್ಷಿ ಇಲ್ಲ, ಯಾವುದೇ ವಯರ್ ತುಂಡಾಗಿ ನೆಲಕ್ಕೆ ಬಿದ್ದ ತಕ್ಷಣ ಭೂ ಸಂಪರ್ಕಕ್ಕೆ ಬಂದಾಗ Multi Unit Sub Station ನಲ್ಲಿ ಫೀಡರ್ ಟ್ರಿಪ್ ಆಗುತ್ತದೆ, ಈ ಪ್ರಕರಣದಲ್ಲಿ ವಯರ್ ತುಂಡಾಗಿ ಬೀಳುವಾಗ ಹಸು ಮೇಲೆ ಬಿದ್ದಿರಬಹುದು ಎಂದು ಉತ್ತರಿಸುತ್ತಾರೆ. ವಿದ್ಯುತ್ ಪರಿವೀಕ್ಷಕರು ಸರ್ಕಾರಕ್ಕೆ ನೀಡಿರುವ ವರದಿ ತಪ್ಪು ಎಂದು ನೀವೇನಾದರು ಸರ್ಕಾರಕ್ಕೆ ಮರು ಮನವಿ ಕೊಟ್ಟಿದ್ದೀರಾ ಎಂದರೆ ಸಾಕ್ಷಿ ಆ ರೀತಿ ಕೊಡಲು ಬರುವುದಿಲ್ಲ, ಆ

ವರದಿಯನ್ನು ಪರಿಗಣಿಸಿಯೇ ನಾವು ಸೂಕ್ತವಾದ ಪರಿಹಾರ ಕೊಟ್ಟಿದ್ದೇನೆ ಎಂದು ಉತ್ತರಿಸುತ್ತಾರೆ. ನೀವು ಕೊಟ್ಟಿರುವ ಪರಿಹಾರ ಕಾನೂನಿಗೆ ಅನುಗುಣವಾಗಿ ಇಲ್ಲ ಎಂಬ ಕಾರಣಕ್ಕಾಗಿಯೇ ಅರ್ಜಿದಾರರು ಈ ಪ್ರಕರಣವನ್ನು ಸಲ್ಲಿಸಿದ್ದಾರೆ ಎಂದರೆ ಸಾಕ್ಷಿ ದಾಖಲಾತಿಗಳನ್ನು ಪರಿಶೀಲಿಸಿಯೇ ಸೂಕ್ತವಾದ ಪರಿಹಾರವನ್ನು ಕೊಟ್ಟಿದ್ದೇವೆ ಎಂದು ಉತ್ತರಿಸುತ್ತಾರೆ. ನೀವು ನೀಡಿರುವ ಪರಿಹಾರ ಬಹಳ ಕಮ್ಮಿ ಇದ್ದು, ಕಾನೂನು ರೀತಿ ಹೆಚ್ಚಿನ ಪರಿಹಾರ ಕೊಡಲು ನೀವು ಬಾಧ್ಯಸ್ಥರು ಎಂದರೆ ಸಾಕ್ಷಿ ಸರಿಯಲ್ಲ ಎಂದು ಉತ್ತರಿಸುತ್ತಾರೆ. ಪರಿಹಾರ ಕೊಡುವುದರಿಂದ ತಪ್ಪಿಸಿಕೊಳ್ಳುವ ಸಲುವಾಗಿ ಸುಳ್ಳು ಪ್ರಮಾಣ ಪತ್ರ ಸಲ್ಲಿಸಿ ಸುಳ್ಳು ಸಾಕ್ಷ್ಯಾ ನುಡಿಯುತ್ತಿದ್ದೀರಿ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇರುವುದಿಲ್ಲ.**

ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.

ಓ. ಹೇ.ಕೇ. ಸರಿ ಇದೆ

(ಶ್ರೀಮತಿ.ಹರಿಣಿ.ಎಂ.ಎಸ್.)
ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು,
ಮದ್ದೂರು.